INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-5, Issue -6, November-December, 2023,
PageNo,25-34
Peer -Reviewed, Refereed Journal

# ನಾಗಮಂಗಲ ತಾಲೂಕಿನ ವೈಷ್ಣವ ದೇವಾಲಯಗಳು–ಒಂದು ಅವಲೋಕನ

**ಹಾರಳು ಮಹಾಬಲೇಶ್ವರ.**[1]

ವೈಷ್ಣವ ಪಂಥವು ವೈದಿಕ ಧರ್ಮದಲ್ಲಿ ತನ್ನದೇ ಆದ ಮಹತ್ವವನ್ನು ಪಡೆದಿತ್ತು ಎಂಬುದಕ್ಕೆ ಈ ನಾಗಮಂಗಲ ತಾಲೂಕು ಪ್ರದೇಶದಲ್ಲಿ ದೊರಕಿರುವಂತ ಪ್ರಾಚೀನ ಕಾಲಘಟ್ಟದ ಹಲವಾರು ದೇವಾಲಯಗಳೇ ಸಾಕ್ಷಿ. ಇದು ಅಷ್ಟೇ ಅಲ್ಲದೇ ಅವು ವಾಸ್ತುಶಿಲ್ಪದಲ್ಲಿಯೂ ಶ್ರೀಮಂತಿಕೆಯನ್ನು ಪಡೆದುಕೊಂಡಿದ್ದು, ಇಂದಿಗೂ ಉಳಿದುಕೊಂಡು ಬಂದಿವೆ.

ಸೌಮ್ಯ ಕೇಶವ ದೇವಾಲಯವು ನಾಗಮಂಗಲ ತಾಲೂಕು ಕೇಂದ್ರೀಯ ಪ್ರದೇಶದಲ್ಲಿದೆ – ಈ ಸೌಮ್ಯ ಕೇಶವ ದೇವಾಲಯವು ಭವ್ಯವಾಗಿದ್ದು, ಹೊಯ್ಸಳರ ಕಾಲಘಟ್ಟದಲ್ಲಿ ನಿರ್ಮಾಣಗೊಂಡಿದೆ. ಅದರ ಮುಂಭಾಗದ ರಾಜಗೋಪುರವು ವಿಜಯನಗರದ ಶ್ರೀಕೃಷ್ಣದೇವರಾಯನ ಕಾಲಘಟ್ಟದಲ್ಲಿ ನಿರ್ಮಿಸಲ್ಪಟ್ಟಿದೆ. ಇದು ನಾಗಮಂಗಲದಲ್ಲಿಯೇ ದೊಡ್ಡ ದೇವಾಲಯವಾಗಿದೆ. ಇದನ್ನು 203*155 ಅಡಿ ನಿವೇಶನದಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯವನ್ನು ಹೊಯ್ಸಳರ ಪ್ರಸಿದ್ಧ ದೊರೆ ವಿಷ್ಣುವರ್ಧನನ ಕಾಲಘಟ್ಟದಲ್ಲಿ ನಿರ್ಮಿಸಿರಬಹುದು. ಆದರೆ ಅದಕ್ಕೆ ಸರಿಯಾದ ದಾಖಲೆಗಳಿಲ್ಲ. ಎರಡನೆಯ ಬಲ್ಲಾಳನ ಕಾಲದಲ್ಲಿ ಹಲಟ್ಟಿಯ ಭೂಮಿಯನ್ನು ಈ ದೇವಾಲಯಕ್ಕೆ ದಾನವಾಗಿ ನೀಡಿದ ವಿವರಗಳು ಅಲ್ಲಿನ ಶಾಸನ ಸಂಖ್ಯೆ – 42 ರಿಂದ ತಿಳಿದುಬರುತ್ತವೆ. ಇದು ಬಲ್ಲಾಳನಿಗಿಂತ ಹಿಂದೆ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣಗೊಂಡಿರಬೇಕೆಂದು ಊಹಿಸಲು ಅವಕಾಶವಿದೆ.

ಇದು ನಾಲ್ಕೂವರೆ ಅಡಿ ಎತ್ತರದ ನಕ್ಷತ್ರಾಕಾರದ ಜಗತಿಯ ಮೇಲೆ ಕಟ್ಟಲಾಗಿರುವ ತ್ರಿಕೂಟ ದೇವಾಲಯವಾಗಿದೆ. ಇದರಲ್ಲಿ ಮೂರು ಗರ್ಭಗುಡಿಗಳಿದ್ದು, ಮಧ್ಯದ ಗರ್ಭ ಗುಡಿಯಲ್ಲಿ ಗರುಡ ಪೀಠದ ಮೇಲೆ ಸುಮಾರು ಆರು ಅಡಿ ಎತ್ತರದ ಸೌಮ್ಯ ಕೇಶವ ಶಿಲ್ಪವಿದೆ. ಇದರ ಪಕ್ಕದಲ್ಲಿ ಶ್ರೀದೇವಿ, ಭೂದೇವಿಯರ ಶಿಲ್ಪಗಳಿವೆ. ಸರ್ಪತೋರಣಯುಕ್ತ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳಿವೆ. ಕೇಶವ ಶಿಲ್ಪದ ಮುಖಭಾವದಲ್ಲಿ ಶಾಂತಿ, ಸೌಮ್ಯತೆಯ ಮಂದಹಾಸ ಎದ್ದು ಕಾಣುತ್ತದೆ. ಚತುರ್ಭುಜಧಾರಿಯಾಗಿರುವ ಈ ಮೂರ್ತಿಯ ಬಲಭಾಗದ ಕೈಗಳಲ್ಲಿ ಶಂಖ ಮತ್ತು ಪದ್ಮಗಳಿದ್ದರೆ,

[1] .ಸಹಾಯಕ ಪ್ರಾಧ್ಯಾಪಕರು,ಇತಿಹಾಸ ವಿಭಾಗ,ಸರ್ಕಾರಿ.ಪ್ರಥಮ ದರ್ಜೆ ಕಾಲೇಜು, ಹೋನ್ನಾಳಿ,ದಾವಣಗೆರೆ ಜಿಲ್ಲೆ.

ಎಡಭಾಗದ ಕೈಗಳಲ್ಲಿ ಚಕ್ರ ಮತ್ತು ಗಧೆಗಳಿವೆ. ಇಕ್ಕೆಲದ ಗರ್ಭಗುಡಿಗಳಲ್ಲಿ ನರಸಿಂಹ ಮತ್ತು ವೇಣುಗೋಪಾಲ ವಿಗ್ರಹಗಳಿವೆ. ಮುಖ್ಯ ಗರ್ಭ ಗುಡಿಯಲ್ಲಿರುವ ವಿಗ್ರಹದಿಂದಾಗಿ ಈ ದೇವಾಲಯಕ್ಕೆ ಸೌಮ್ಯಕೇಶವ ದೇವಾಲಯ ಎಂದು ಕರೆಯಲಾಗುತ್ತಿದೆ. ಮತ್ತೊಂದು ಶಾಸನ ಸಂಖ್ಯೆ – 44ರಲ್ಲಿಯೂ ಕೂಡ ದಾಖಲೀಕರಿಸಲಾಗಿದೆ. ಇದು ಆರಂಭದಲ್ಲಿ ಈ ದೇವಾಲಯವನ್ನು ಚನ್ನಕೇಶವ, ಕೇಶವ ದೇವಾಲಯ ಎಂದು ಕರೆಯುತ್ತಿದ್ದರು ಎಂಬುದು ಶಾಸನಗಳಿಂದ ತಿಳಿಯುತ್ತದೆ. ಗರ್ಭಗುಡಿಯಲ್ಲಿರುವ ಕೇಶವ ಮೂರ್ತಿ ಸೌಮ್ಯಭಾವದಲ್ಲಿ ಇರುವುದರಿಂದ ಇದನ್ನು ಸೌಮ್ಯಕೇಶವ ದೇವಾಲಯ ಎಂದು ಕರೆಯಲಾಗಿದೆ.

ಹೊಯ್ಸಳ ಶೈಲಿಯ ಪ್ರಧಾನ ಗರ್ಭಗೃಹ, ಅಂತರಾಳ, ಸುಕನಾಸಿ ಮತ್ತು ನವರಂಗಗಳಿದ್ದು, ನವರಂಗದ ಮುಂಭಾಗದಲ್ಲಿ ಅರ್ಧಮಂಟಪವನ್ನು ರಚಿಸಲಾಗಿದೆ. ಆನಂತರದಲ್ಲಿ ನವರಂಗಕ್ಕೆ ಮೂರು ಅಂಕಣದ ಮುಖ ಮಂಟಪವನ್ನು ಸೇರಿಸಲಾಗಿದೆ, ಇವಿಷ್ಟಕ್ಕೂ ಎತ್ತರದ ಜಗತಿ ಇದೆ. ವಿಜಯನಗರ ಕಾಲದಲ್ಲಿ ಪಾತಾಳಾಂಕಣ, ಪ್ರಾಕಾರಕ್ಕೆ ಹೊಂದಿಕೊಂಡಂತಿರುವ ಸುತ್ತಾಲಯ ಮಂಟಪ, ಮಹಾದ್ವಾರ, ಗೋಪುರ, ಗರುಡಗಂಬಗಳನ್ನು ಸೇರಿಸುವುದರೊಂದಿಗೆ ದೇವಾಲಯ ವಿಸ್ತಾರಗೊಂಡಿದೆ.

ಗರ್ಭಗೃಹ ಮತ್ತು ಸುಕನಾಸಿಯ ಬಾಗಿಲವಾಡಗಳಿಗೆ ದ್ವಾರಪಾಲಕರನ್ನು ಇರಿಸಲಾಗಿದೆ. ನವರಂಗಕ್ಕೆ ಬಹುಕೋನಾಕಾರವಾದ 32 ಮೂಲೆಯ ವೈವಿಧ್ಯಮಯ ಕಂಬಗಳಿದ್ದು, ಭುವನೇಶ್ವರಿಗಳಲ್ಲಿ ಅಲಂಕೃತ ಕಮಲ, ನಕ್ಷತ್ರಗಳು ಕಂಗೊಳಿಸುತ್ತಿವೆ. ಪ್ರಧಾನ ಭುವನೇಶ್ವರಿಯ 16 ಸುತ್ತಿನಲ್ಲಿ 108ಕ್ಕೂ ಮೀರಿದ ಬಲಮುರಿ ಶಂಖಗಳ ಕೆತ್ತನೆಯಿದೆ. ಇದರಿಂದ ಅಷ್ಟ ದಿಕ್ಪಾಲಕರಿಂದ ಆವೃತವಾದ ಕಮಲಾಲಂಕಾರವನ್ನು ಹೊಂದಿದೆ. ಶಂಖವೇ ಕಮಲದ ಮೊಗ್ಗಾಗಿ ಅದನ್ನು ಬಳಸಿ ಹೆಡೆ ಎತ್ತಿರುವ ಮಂಡಲಾಕೃತಿಯ ಸರ್ಪದ ಅಥವಾ ಆದಿಶೇಷನ ಶಿಲ್ಪ ಮನೋಜ್ಞವಾಗಿದೆ. ಇದು ನಾಗಮಂಗಲದ ಸ್ಥಳನಾಮ ಅನ್ವಯ ನಾಗರಗಳಿಂದಾಗಿ ಬಂದಿದೆ ಎನ್ನುವುದನ್ನು ಸಂಕೇತಿಸುವಂತಿದೆ. ಇದರ ನವರಂಗದಲ್ಲಿರುವ ನಾಗಶಿಲ್ಪಗಳೂ ಇದಕ್ಕೆ ಪೂರಕವಾಗಿದ್ದು, ನಾಗಪೂಜೆಯೂ ಇಲ್ಲಿ ಜರುಗುತ್ತದೆ. ನವರಂಗವು 12 ಅಂಕಣಗಳಿಂದ ಕೂಡಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಚಿತ್ರ ಆಕರ್ಷಕವಾಗಿದೆ. ನವರಂಗದ 12 ಭುವನೇಶ್ವರಿಗಳಲ್ಲಿ ನಾಲ್ಕು ಭುವನೇಶ್ವರಿ ಅಥವಾ ಜಾವಣಿಗಳನ್ನು ಬೆಳಕಿಗಾಗಿ ತೆಗೆಯಲಾಗಿದೆ. ಮಧ್ಯೆ ಭುವನೇಶ್ವರಿಯ ನಾಲ್ಕು ಕಂಬಗಳು ಭವ್ಯವಾಗಿವೆ.

ದೇವಾಲಯ ಹೊರಭಿತ್ತಿಯ ಮೇಲೆ ಕೇವಲ ಅರೆಗಂಬಗಳ ಅಲಂಕರಣವಿದೆ. ಅಧಿಷ್ಠಾನ, ಭಿತ್ತಿ, ಹಾರ, ಶಿಖರ ಇವೆಲ್ಲವೂ ಸಂಪೂರ್ಣವಾಗಿ ಮೂರ್ತಿರಹಿತವಾಗಿರುವುದು ಇಲ್ಲಿನ ವಿಶೇಷತೆಯೇ ಆಗಿರುತ್ತದೆ. ಮುಂದುಗಡೆ ಪಾತಾಳಾಂಕಣ ಸುತ್ತಲೂ ಪ್ರಾಕಾರ ಮತ್ತು ಮಹಾದ್ವಾರದ ಮೇಲೆ ಏಳು ಅಂತಸ್ತಿನ ದ್ರಾವಿಡ ಶೈಲಿಯ ಗೋಪುರವಿದೆ. ಪ್ರಾಕಾರದಲ್ಲಿರುವ ಗುಡಿಗಳಲ್ಲಿ ಶ್ರೀವೈಷ್ಣವ ಸಂಪ್ರದಾಯದ

ದೇವರುಗಳಾದ ನಾರಾಯಣಸ್ವಾಮಿ, ಹನುಮಂತ ಮತ್ತು ಆಳ್ವಾರರುಗಳ ವಿಗ್ರಹಗಳಿವೆ. ಅಲ್ಲದೇ ಅಲ್ಲೇ ಪಾಳೇಗಾರರ ಕಾಲಘಟ್ಟದಲ್ಲಿ ಸ್ಥಾಪಿಸಲ್ಪಟ್ಟವೆಂದು ನಂಬಲಾದ ಶ್ರೀದೇವಿ, ಭೂದೇವಿ, ನೀಳಾದೇವಿ, ಸುದರ್ಶನ, ಹನುಮಂತ ಇವರ ಸಣ್ಣ ಪುಟ್ಟ ಗುಡಿಗಳಿವೆ. ದೇವಾಲಯದ ಮುಂದಿರುವ ಗರುಡಗಂಬ ಉತ್ತಮ ಕಲಾಕೃತಿಯನ್ನು ಹೊಂದಿದ್ದು, ಇದು 55 ಅಡಿ ಎತ್ತರವಿದೆ. ಕಂಬದ ನಾಲ್ಕು ಪಾರ್ಶ್ವಗಳಲ್ಲಿ ಗರುಡ, ಹನುಮಂತ, ಚಕ್ರ, ಶಂಖ ಹಾಗೂ ತ್ರಿಪುಂಡ್ರಸಿಂಹ ಆಕೃತಿಗಳನ್ನು ಕೆತ್ತಲಾಗಿದೆ.

ದೇವಾಲಯದ ಪ್ರಾಕಾರದಲ್ಲಿರುವ ಕಂಬಗಳ ಮೇಲಿನ ಉಬ್ಬು ಶಿಲ್ಪಗಳಲ್ಲಿ ಹೆಚ್ಚಿನವು ನೃತ್ಯ ಮತ್ತು ಮಲ್ಲಯುದ್ಧಕ್ಕೆ ಸಂಬಂಧಪಟ್ಟಿವೆ. ಇದು ಈ ಪ್ರದೇಶದ ಸಂಸ್ಕೃತಿಗೆ ಕನ್ನಡಿ ಹಿಡಿದಂತಿದೆ. ಸೌಮ್ಯನಾಯಕಿ ದೇವಿಯ ಗುಡಿಯ ಮುಂದಿನ ಪ್ರಾಂಗಣದ ಕಂಬಗಳಲ್ಲಿನ ಹಲವು ಉಬ್ಬು ಶಿಲ್ಪಗಳಲ್ಲಿ ಮಮತೆ ತುಂಬಿದ ಸ್ತ್ರೀಯೋರ್ವಳು ಎಳೆಗರುವಿಗೆ ತನ್ನ ಎದೆಹಾಲು ಕುಡಿಸುತ್ತಿರುವುದು ಮಾನವೀಯತೆಯ ದ್ಯೋತಕವಾಗಿದೆ. ಕೆಳಗೆ ಬಾಗಿದ, ಹಿಂದೆ ತಿರುಗಿದ, ಮುಂದೆ ದೃಷ್ಟಿಸಿರುವ ಮೂರು ತಲೆಯ ಜಿಂಕೆಗೆ ಒಂದೇ ಶರೀರದ ಸಂಯೋಜನೆ, ವೃಷಭ ಮತ್ತು ಆನೆಗಳ ಶಿಲ್ಪ ಸಂಯೋಜನೆ, ಪದ್ಮಾಸನದಲ್ಲಿ ತಲೆಕೆಳಕಾಗಿರುವ ಭಂಗಿ, ಮಿಥುನ ಶಿಲ್ಪಗಳು, ಗಣಪ, ವ್ಯಾಳಿ, ಅಂಬೆಗಾಲು ಕೃಷ್ಣ, ಗೋವರ್ಧನ ಗಿರಿಧಾರಿ ಹೀಗೆ ಇನ್ನಿತರ ಶಿಲ್ಪಗಳು ಆಕರ್ಷಣೀಯವಾಗಿವೆ. ಮಹಾದ್ವಾರದ ಕಂಬಗಳಲ್ಲಿ ವೇಣುಗೋಪಾಲ, ಕಾಳಿಂಗ ಮರ್ಧನ ಶಿಲ್ಪಗಳಲ್ಲದೆ, ನೃತ್ಯ ವಿಶೇಷಗಳಲ್ಲಿ ಒಬ್ಬ ನೃತ್ಯಗಾರ್ತಿ ತನ್ನ ಎಡಪಾದವನ್ನು ತನ್ನ ತಲೆ ಮೇಲೆ ಇಟ್ಟುಕೊಂಡಿರುವ ಭಂಗಿ ಇತರ ನೃತ್ಯಗಾರ್ತಿಯರಿಗೆ ಸವಾಲು ಹಾಕಿದಂತೆ ಕಾಣುತ್ತದೆ. ಇನ್ನು ಮುಖಮಂಟಪದ ಕಂಬಗಳಲ್ಲಿರುವ ಶಿಲ್ಪಗಳಲ್ಲಿ ಮಲ್ಲಯುದ್ಧದಲ್ಲಿ ಚಕ್ರವ್ಯೂಹ ಚಮತ್ಕಾರ ರೋಮಾಂಚನವಾಗಿದೆ. ಸ್ತ್ರೀಯೋರ್ವಳ ಉದ್ದ ಜಡೆಯ ತುದಿಯನ್ನು ಹಂಸಪಕ್ಷಿ ತನ್ನ ಕೊಕ್ಕಿನಿಂದ ಹಿಡಿದಿರುವುದು ಮತ್ತು ಕೋಡಂಗಿ ವೇಷಧಾರಿ ಮನಸೆಳೆಯುವಂತಿದೆ. ಇದೇ ಮಂಟಪದಲ್ಲಿ ವ್ಯಾಳಿಗಳ ಮೇಲೆ ನಾಗಗಳಿವೆ. ರಾಮಾನುಜ ಸನ್ನಿಧಿಯ ಕಂಬಗಳಲ್ಲಿ ಶಾರದೆ ಮತ್ತು ಸರಸ್ವತಿಯರ ಶಿಲ್ಪಗಳು ಮನೋಜ್ಞವಾಗಿವೆ.

**ಯೋಗಾನರಸಿಂಹಸ್ವಾಮಿ ದೇವಾಲಯ–ನಾಗಮಂಗಲ –** ಸೌಮ್ಯಕೇಶವ ದೇವಾಲಯದ ಹಿಂದೆ ಸಮೀಪದಲ್ಲಿ ಯೋಗಾನರಸಿಂಹಸ್ವಾಮಿ ದೇವಾಲಯವಿದೆ. ಇದು ಇಲ್ಲಿಯ ಮತ್ತೊಂದು ಪ್ರಾಚೀನ ದೇವಾಲಯವಾಗಿದೆ. ಗರ್ಭಗೃಹ, ಪ್ರದಕ್ಷಿಣಾಪಥ, ಅಂತರಾಳ, ನವರಂಗ, ಮುಖಮಂಟಪ, ಪಾತಳಾಂಕಣ, ಬಳಕಸಾಲೆ ಮಂಟಪವಿರುವ ಪ್ರಾಕಾರ ಹಾಗೂ ಮಹಾದ್ವಾರಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿರುವ ಮೂರ್ತಿಯು ಸುಂದರವಾಗಿದ್ದು, ಮೇಲುಕೋಟೆ, ಕಿಕ್ಕೇರಿಗಳಲ್ಲಿರುವಂತೆ ಇದು ಯೋಗಮುದ್ರೆಯಲ್ಲಿದೆ. ಈ ದೇವಾಲಯವನ್ನು ಮೊದಲಿಯಹಳ್ಳಿಯ ನರಸಿಂಹನಾಯಕ ಮತ್ತು ತಿಮ್ಮಣ್ಣನಾಯಕರು ನಿರ್ಮಿಸಿರುವುದು ಕಂಡುಬರುತ್ತದೆ. ಇಲ್ಲಿನ ಕಂಬಗಳನ್ನು ಬಿಟ್ಟರೆ ಹೆಚ್ಚಿನ ಕಲಾವಂತಿಕೆ

ಇಲ್ಲಿಲ್ಲ. ಆದಿಶೇಷ ಶಿಲ್ಪದ ಬಳಿ ಇರುವ ಪೊಟರೆಯು ಅನಂತತೀರ್ಥ ನಾಗರಾಜನ ವಾಸಸ್ಥಾನವಾಗಿದೆ. ಹಿಂದೆ ಅಲ್ಲಿದ್ದ ಹಂಗರು ಮರದ 40 ಅಡಿ ಉದ್ದದ ಒಂದು ಕೊಂಬೆ ಈ ದೇವಾಲಯದಲ್ಲಿದೆ. ಇದನ್ನು ನರಸಿಂಹನ ಪ್ರಾಚೀನ ಶಿಲ್ಪವಿದ್ದ ಸ್ಥಳವೆಂದು ಅಭಿಪ್ರಾಯಪಡಲಾಗಿದೆ.

**ಚನ್ನಕೇಶವ ದೇವಾಲಯ–ಬಿಂಡಿಗನವಿಲೆ** – ಬಿಂಡಿಗನವಿಲೆ ತೀರ್ಥ ಎಂಬುದಾಗಿ ಪ್ರಸಿದ್ಧವಾದ ಜೈನ ಕ್ಷೇತ್ರವಾಗಿದ್ದ ಬಿಂಡಿಗನವಿಲೆಯು ಅನಂತರದಲ್ಲಿ ಪ್ರಮುಖ ಶ್ರೀವೈಷ್ಣವ ಕೇಂದ್ರವಾಗಿಯೂ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿರುವ ಆದಿಚನ್ನಕೇಶವ ದೇವಾಲಯವು ದ್ರಾವಿಡ ಮಾದರಿಯಲ್ಲಿರುವ ಬೃಹತ್ ದೇವಾಲಯವಾಗಿದೆ. ಇದು ಸುಮಾರು 1000 ವರ್ಷಗಳ ಹಿಂದೆಯೇ ನಿರ್ಮಾಣಗೊಂಡಿದೆ. ಚನ್ನಕೇಶವ ದೇವಾಲಯವು ಮುಖಮಂಟಪ, ಪ್ರಾಂಗಣ, ನವರಂಗ, ಎರಡು ಸುಖನಾಸಿ ಮಂಟಪಗಳು ಮತ್ತು ಗರ್ಭಗುಡಿಯನ್ನು ಹೊಂದಿದೆ. ಗರ್ಭಗುಡಿಯ ಚನ್ನಕೇಶವ ವಿಗ್ರಹಕ್ಕೆ ಹಿತ್ತಾಳೆಯ ಪ್ರಭಾವಳಿ ಇದೆ ಭೂದೇವಿ, ಶ್ರೀದೇವಿ ಮತ್ತು ಚನ್ನಕೇಶವ ಉತ್ಸವ ಮೂರ್ತಿಗಳನ್ನು ಮೊದಲ ಸುಖನಾಸಿಯಲ್ಲಿ ಇಟ್ಟಿದ್ದಾರೆ. ಸುಖನಾಸಿ ಮಂಟಪಗಳ ಇಕ್ಕೆಲಗಳಲ್ಲಿ ವೈನತೇಯ ಮತ್ತು ಸೌಮ್ಯನಾಯಕಿ ದೇವಿಯ ಗುಡಿಗಳಿವೆ. ವೈನತೇಯ ಮೂರ್ತಿ ಇರುವ ಕಡೆ ಆಂಜನೇಯ ಮೂರ್ತಿಯೂ ಇದೆ. ಸೌಮ್ಯನಾಯಕಿಯ ಮೂರ್ತಿಯು ಶಿಲೆಯಿಂದ ನಿರ್ಮಿತವಾಗಿದ್ದರೆ, ವೈನತೇಯ ಮೂರ್ತಿಯು ಶ್ರೀಗಂಧದಿಂದ ಕೆತ್ತಲ್ಪಟ್ಟಿದೆ. ಉತ್ಸವ ಮೂರ್ತಿಗಳು ಪಂಚಲೋಹದಿಂದ ತಯಾರಿಸಲ್ಪಟ್ಟಿವೆ.

ನವರಂಗದ ಬಾಗಿಲುವಾಡಕ್ಕೆ ಹಿತ್ತಾಳೆಯ ಕವಚವಿದೆ. ಪ್ರಾಂಗಣದಲ್ಲಿ ಧ್ವಜಸ್ತಂಭವಿದೆ. ಧ್ವಜಕ್ಕೆ ಹಿತ್ತಾಳೆಯ ಕವಚವಿದೆ. ಇದರಲ್ಲಿ ಶಂಖ, ಚಕ್ರ ಹಾಗೂ ನಾಮದ ಕೆತ್ತನೆಯಿದೆ. ಇಲ್ಲಿ ಹದಿನಾರು ಕಂಬಗಳಿಂದ ಕೂಡಿದ ವಿಶಾಲವಾದ ಪ್ರಾಂಗಣವಿದೆ. ಇದರಲ್ಲಿ ಪಾಕಶಾಲೆ ಪ್ರಾಕಾರ ಹಾಗೂ ಬಾವಿ ಇದೆ. ಪ್ರಾಂಗಣದಲ್ಲಿ ರಾಮಾನುಜಾಚಾರ್ಯರ ಮಂಟಪವಿದೆ. ಜೊತೆಗೆ ಆಳ್ವಾರ್ ವೇದಾಂತ ದೇಶಿಕರ್ ಅವರ ಮಂಟಪವೂ ಇದೆ. ಪಾತಾಳಾಂಕಣದಲ್ಲಿರುವ ರಾಮಾನುಜರ ಗುಡಿಯ ಗರ್ಭಗೃಹ ಮತ್ತು ಅಂತರಾಳ ಭಾಗದ ಭಿತ್ತಿಯು ಹೊಯ್ಸಳ ಶಿಲ್ಪದ ಲಕ್ಷಣದಿಂದ ಕೂಡಿದ್ದು, ನವರಂಗ ಹಾಗೂ ಉಳಿದ ಭಾಗಗಳು ವಿಜಯನಗರ ಕಾಲದ ರಚನೆಯಾಗಿವೆ. ರಾಮಾನುಜಚಾರ್ಯರು ಚನ್ನಕೇಶವ ದೇವಾಲಯಕ್ಕೆ ಬಂದು ಸ್ವಾಮಿಯ ದರ್ಶನ ಪಡೆದು ಅನಂತರ ವಿಷ್ಣುವರ್ಧನನ ಸಹಾಯದಿಂದ ಈ ದೇವಾಲಯವನ್ನು ಅಭಿವೃದ್ಧಿ ಪಡಿಸಿದರು ಎಂಬ ನಂಬಿಕೆಯಿದೆ. ಶಾಸನ ಸಂಖ್ಯೆ – 57ರಲ್ಲಿಯೂ ಕೂಡ ರಾಮಾನುಜಚಾರ್ಯರು ಇಲ್ಲಿಗೆ ಬಂದು ತಪಸ್ಸು ಮಾಡುತ್ತಿದ್ದರು ಎಂದು ಹೇಳುತ್ತದೆ. ಈ ಪಡುವಲಪಟ್ಟಣ ಭಾಗದಲ್ಲಿ ರಾಮಾನುಜರು ಹೊಯ್ಸಳರ ಸಂಪರ್ಕ ಸಿಗುವ ಮೊದಲೇ ಇದ್ದಿರಬಹುದು. ಅದಕ್ಕಾಗಿ ಶಾಸನ ಹಾಕಿಸಿರಬಹುದು. ಹಾಗಾಗಿ ಪಡುವಲ ಪಟ್ಟಣದಿಂದ ಬಿಂಡಿಗನವಿಲೆ ಚನ್ನಕೇಶವ

ದೇವಾಲಯಕ್ಕೆ ಅವರು ಭೇಟಿ ನೀಡಿ ಪೂಜಾಕಾರ್ಯ ಕೈಗೊಂಡು ಮುಂದೆ ಈ ದೇವಾಲಯದ ಏಳಿಗೆಗೆ ಕೊಡುಗೆ ನೀಡಿರಬಹುದೆಂದು ಹೇಳಬಹುದಾಗಿದೆ.

ಈ ದೇವಾಲಯಕ್ಕೆ ಕೇವಲ ರಾಜರಷ್ಟೇ ಅಲ್ಲದೇ ಭಕ್ತರೂ ಸಹ ಹಲವಾರು ಸೇವೆಗಳನ್ನು ಮಾಡಿದ್ದಾರೆ. ಕ್ರಿ.ಶ.1371ರ ಕಾಲಕ್ಕೆ ಸೇರಿದ ಕೇಶವ ದೇವಾಲಯದ ನವರಂಗ ಈಶಾನ್ಯ ಕಂಬದ ಮೇಲಿರುವ ಶಾಸನ ಸಂಖ್ಯೆ – 58ರಲ್ಲಿ ಲೆಹದ ರೆಮ್ಮರಸರ ಮಗ ನೋಟದ ಪಡರಿದೇವನು ಕೇಶವ ದೇವರ ರಂಗಮಂಟಪಕ್ಕೆ ಕಂಬ ಮಾಡಿಸಿಕೊಟ್ಟ ವಿಷಯವನ್ನು ತಿಳಿಸುತ್ತದೆ. ಅಲ್ಲಿಯೇ ನವರಂಗದ ಗರುಡ ಸನ್ನಿಧಿಯ ಎದುರಿಗೆ ದಕ್ಷಿಣ ಗೋಡೆಗೆ ಸೇರಿರುವ ಕಂಬವನ್ನು ಮಾದನೂರ ಸಾರತಿದೇವನ ಮಗ ಸಿಂಗಣ್ಣ ಮಾಡಿಸಿದ್ದಾನೆ. ರಂಗಮಂಟಪದ ಗರುಡದೇವರ ಗುಡಿಗೆ ಎದುರಾಗಿರುವ ಕಂಬವನ್ನು ಕಸವಾಡೆಯ ಚಿಕ್ಕಣ್ಣನ ಮಗ ಬಯಣ್ಣನು ಮಾಡಿಸಿದ್ದಾನೆ. ಅಲ್ಲಿರುವ ದಕ್ಷಿಣದ ಮತ್ತೊಂದು ಕಂಬವನ್ನು ಬಿರೋಜ ಎಂಬುವವನು ಮಾಡಿಸಿದ್ದಾನೆ. ಪೂರ್ವದ ಕಂಬವನ್ನು ಕೆಂಪಿಸೆಟ್ಟಿ(ಕೆಂಪಿಸೆಟಿ)ಯ ಮಗ ವೊಡುವ ಸೆಟ್ಟಿ (ವೊಡುವ ಸಟಿ) ಮಾಡಿಸಿದ್ದಾನೆ. ಕೇಶವ ದೇವಾಲಯದಲ್ಲಿರುವ ದೇಶಿಕರ ಗುಡಿಯ ಪಶ್ಚಿಮ ಕಂಬವನ್ನು ತೊಟಿಲಸೆಟ್ಟಿ, ತಿಮ್ಮಸೆಟ್ಟಿ, ಅವರು ಕೊಡುಗೆಯಾಗಿ ನೀಡಿದ್ದಾರೆ. ಆ ದೇವಾಲಯದ ಬಾಗಿಲ ಎಡಗಡೆ ಕಂಬವನ್ನು ಶ್ರೀಮತ್ ತಾತಾಚಾಸೆವಲ ಅವರು ಮಾಡಿಸಿಕೊಟ್ಟಿದ್ದಾರೆ. ಈ ಶಾಸನಗಳಿಂದ ನಮಗೆ ತಿಳಿದು ಬರುವುದೇನೆಂದರೆ ಹೊಯ್ಸಳರ ಕಾಲಕ್ಕಿಂತ ಮುಂಚೆಯೇ ಈ ದೇವರ ಪ್ರತಿಷ್ಠಾಪನೆಯಾಗಿದ್ದು ಅನಂತರ ರಾಮಾನುಜಾಚಾರ್ಯರ ಸಲಹೆ ಮೇರೆಗೆ ಈ ದೇವಾಲಯದ ಜೀರ್ಣೋದ್ಧಾರಗೊಂಡಿದೆ. ಅನಂತರ ಹಲವಾರು ಭಕ್ತರು ಈ ದೇವಾಲಯದ ವಿಸ್ತರಣಾ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ವಿಜಯನಗರ ಕಾಲದಲ್ಲಿ ಇದು ಇನ್ನಷ್ಟು ಅಭಿವೃದ್ಧಿಗೊಂಡು ಸಾಕಷ್ಟು ಪ್ರಖ್ಯಾತಿಯನ್ನು ಗಳಿಸಿದೆ. ಅನಂತರ 17ನೆಯ ಶತಮಾನದಲ್ಲಿ ಕೂಡ ಭಕ್ತರು ದೇವರ ಸೇವಾರ್ಥವಾಗಿ ಹಲವಾರು ಕಂಬಗಳನ್ನು ಮಾಡಿಸಿ ಹಾಕಿದ್ದಾರೆ. ಒಟ್ಟಾರೆಯಾಗಿ ಕೇಶವ ದೇವಾಲಯವು ರಾಜರ ಭಕ್ತರ ಮನ್ನಣೆಯಿಂದ ಪ್ರಸಿದ್ಧವಾಗಿತ್ತು ಎಂಬುದು ತಿಳಿದುಬರುತ್ತದೆ.

**ಮಾಧವ ದೇವಾಲಯ–ಬೆಳ್ಳೂರು –** ಬೆಳ್ಳೂರು ನಾಗಮಂಗಲದಿಂದ ಉತ್ತರಕ್ಕೆ 16 ಕಿ.ಮೀ ದೂರದಲ್ಲಿರುವ ಒಂದು ಹೋಬಳಿ ಕೇಂದ್ರವಾಗಿದೆ. ಇತಿಹಾಸ ಪ್ರಸಿದ್ಧವಾದ ಈ ಊರು ಕ್ರಿ.ಶ.13ನೆಯ ಶತಮಾನಕ್ಕೂ ಹಿಂದೆಯೇ ಅಸ್ತಿತ್ವದಲ್ಲಿತ್ತು ಎಂಬುದು ಅಲ್ಲಿನ ಶಾಸನಗಳು ಮತ್ತು ಪ್ರಾಚೀನ ಸ್ಮಾರಕಗಳಿಂದ ತಿಳಿದುಬರುತ್ತದೆ. ಈ ಬೆಳ್ಳೂರನ್ನು ಶಾಸನಗಳಲ್ಲಿ ಉದ್ಭವ ನರಸಿಂಹಪುರ ಎಂದು ಕರೆಯಲಾಗಿದೆ. ಇದೊಂದು ಅಗ್ರಹಾರವಾಗಿತ್ತು ಹಾಗೂ ವೇದಾಧ್ಯಯನಕ್ಕೆ ಹೆಸರಾಗಿತ್ತೆಂದು 13ನೆಯ ಶತಮಾನದ ಶಾಸನ65ದಿಂದ ತಿಳಿದುಬರುತ್ತದೆ. ಹೊಯ್ಸಳರ ಪ್ರಮುಖ ಆಡಳಿತ ಕೇಂದ್ರಗಳಲ್ಲಿ ಒಂದಾಗಿದ್ದ ಈ ಬೆಳ್ಳೂರಿನಲ್ಲಿ ಹಲವಾರು ಪ್ರಸಿದ್ಧ ದೇವಾಲಯಗಳಿವೆ. ಇವುಗಳಲ್ಲಿ ಶಾಸನೋಕ್ತ ಆದಿ ಮಾಧವರಾಯ

ದೇವಾಲಯವು ಮುಖ್ಯವಾದುದಾಗಿದೆ. ಈ ಆದಿಮಾಧವರಾಯ ದೇವಾಲಯವು ತ್ರಿಕೂಟಾಚಲ ರಚನೆಯಿಂದ ಕೂಡಿದೆ. ಮೂಲಗುಡಿಯು ಐದು ಸ್ತರದ ಜಗತಿಯ ಮೇಲೆ ನಿಂತಿದ್ದು, ಪ್ರಧಾನ ಗರ್ಭಗೃಹ, ಅಂತರಾಳ, ಉತ್ತರ–ದಕ್ಷಿಣದ ಗರ್ಭಗೃಹಗಳನ್ನು ಒಗ್ಗೂಡಿಸುವ ನವರಂಗ ಹಾಗೂ ಆರಂಕಣದ ತೆರೆದ ಅರ್ಧ ಮಂಟಪವನ್ನು ಹೊಂದಿದೆ. ಅದರ ಮುಂದಿರುವ ರಂಗಮಂಟಪ ಸೌಮ್ಯನಾಯಕಿ ಮತ್ತು ರಂಗನಾಯಕಿ(ವಸಂತನಾಯಕಿ) ದೇವಾಲಯ, ಪ್ರಾಕಾರ, ಮಹಾದ್ವಾರ ಹಾಗೂ ದೀಪಸ್ತಂಭಗಳು ವಿಜಯನಗರ ಕಾಲದ ಸೇರ್ಪಡೆಗಳಾಗಿವೆ. ಪ್ರಧಾನ ಗರ್ಭಗೃಹದಲ್ಲಿ ಚತುರ್ಭುಜದಾರಿ ಮಾಧವನ ಅತ್ಯಾಕರ್ಷಕ ಶಿಲ್ಪವಿದೆ. ಬಲಭಾಗದ ಕೈಗಳಲ್ಲಿ ಚಕ್ರ, ಗದೆ, ಎಡಭಾಗದ ಕೈಗಳಲ್ಲಿ ಶಂಖ, ಪದ್ಮ ಹಿಡಿದ ಅಭಯಹಸ್ತವಿರುವುದು ವಿಶೇಷ. ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಗಳಿವೆ. ಮತ್ತೆರಡು ಗರ್ಭಗುಡಿಗಳಲ್ಲಿ ಗೋಪಾಲ(ವೇಣುಗೋಪಾಲ) ಮತ್ತು ಜನಾರ್ಧನ(ವರದರಾಜ) ಶಿಲ್ಪಗಳಿವೆ. ವೇಣುಗೋಪಾಲ ಶಿಲ್ಪವು ತ್ರಿಭಂಗಿಯಲ್ಲಿದ್ದು, ಅದರ ಪ್ರಭಾವಳಿಯ ಕೆತ್ತನೆಯೂ ಬಹುಸುಂದರವಾಗಿದೆ. ನವರಂಗದ ಕಂಬ ಛತ್ತುಗಳು ಆಕರ್ಷಕವಾಗಿದ್ದು, ರಾಮಾನುಜ, ಆಳ್ವಾರರು, ಗಣಪತಿಯ ಶಿಲ್ಪಗಳು ಸಹ ಇವೆ. ಈ ದೇವಾಲಯದ ಬಾಗಿಲವಾಡಗಳ ಲಲಾಟದಲ್ಲಿ ಗಜಲಕ್ಷ್ಮಿಯರಿದ್ದು ಕೆಳಗೆ ಅಕ್ಕ–ಪಕ್ಕ ದ್ವಾರಪಾಲಕರಿದ್ದಾರೆ. ಪ್ರಾಕಾರದೊಳಗೆ ಪ್ರಧಾನ ಗುಡಿಯ ಎಡಕ್ಕೆ ಸೌಮ್ಯನಾಯಕಿ ಮತ್ತು ರಂಗಮಂಟಪದ ಬಲಕ್ಕೆ ರಂಗನಾಯಕಿಯರ ಪ್ರತ್ಯೇಕ ಗುಡಿಗಳಿದ್ದು ಒಳಗೆ ವಿಜಯನಗರ ಕಾಲದ ದೇವಿ ಶಿಲ್ಪಗಳಿವೆ. ಪ್ರಧಾನ ಗರ್ಭಗೃಹವು ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿದ್ದು, ಭಿತ್ತಿಯಲ್ಲಿ ಅಲಂಕಾರಿಕ ಅರೆಕಂಬ ಕಿರುಶಿಖರ ಮಾದರಿಗಳಿದ್ದರೂ ನಿರಾಡಂಬರವಾಗಿದ್ದು, ಮೇಲೆ ದ್ರಾವಡ ಶಿಖರವಿದೆ. ಈ ದೇವಾಲಯದಲ್ಲಿನ ವಿಶೇಷ ಆಕರ್ಷಣೆಯೆಂದರೆ ಶೃಂಗಾರಭಂಗಿಯ ಶ್ರೀಕೃಷ್ಣನ ವಿಗ್ರಹ. ಈ ಶಿಲ್ಪವು ಪರಿಪೂರ್ಣ ಶಿಲ್ಪಶಾಸ್ತ್ರದ ಪ್ರತಿನಿಧಿಯಂತಿದೆ. ಮೂಲ ಮೂರ್ತಿ ಮಾಧವನಾದರೆ, ಉತ್ಸವ ಮೂರ್ತಿ ಕೇಶವ ರೂಪದಲ್ಲಿರುವುದು ಇಲ್ಲಿಯ ವಿಶೇಷವಾಗಿದೆ. ಈ ದೇವಾಲಯ ಕ್ರಿ.ಶ.1269 ರಿಂದ ಕ್ರಿ.ಶ.1284 ರೊಳಗೆ ನಿರ್ಮಾಣವಾಗಿದ್ದ ಅಂಶ ಶಾಸನಗಳಿಂದ ತಿಳಿದುಬರುತ್ತದೆ.

ಮಾಧವ ದೇವಾಲಯದ ಚಂದ್ರಶಾಲೆಯಲ್ಲಿರುವ ಒಂದು ಶಾಸನವು ಮೂರನೆಯ ನರಸಿಂಹನ ಕಾಲಕ್ಕೆ ಸೇರಿದ್ದು. ಈತನ ಮಹಾಪ್ರಧಾನನಾದ ಪೆರುಮಾಳದೇವ ದಂಡನಾಯಕನು ಉದ್ಭವ ನರಸಿಂಹಪುರವಾದ ಬೆಳ್ಳೂರಿನ ಪ್ರಸನ್ನಮಾಧವ, ರಾಮಕೃಷ್ಣ ಮತ್ತು ವರದ ಅಲ್ಲಾಳನಾಥ ದೇವಾಲಯಗಳ ಪೂಜೆ ಪುರಸ್ಕಾರಕ್ಕಾಗಿ ಬೆಟ್ಟದಕೋಟೆ, ಬಿಲ್ಲಬಿಳಗುಂದ ಮತ್ತು ತಿಪ್ಪೂರು ಈ ಮೂರು ಹಳ್ಳಿಗಳನ್ನು ಹೊಯ್ಸಳರ ಮೂರನೆಯ ನರಸಿಂಹನಿಂದ ದತ್ತಿ ಪಡೆದಿದ್ದಾನೆ. ಈ ಮೂರು ದೇವಾಲಯಗಳ ಮೇಲ್ವಿಚಾರಣೆಯನ್ನು ಈತನಿಗೆ ವಹಿಸಲಾಗಿದೆ. ಇವನು ಆ ದತ್ತಿಯನ್ನು 96 ಮಹಾಜನಗಳಿಗೆ ಹಂಚಲು, ಅವರು ಆ ಹಳ್ಳಿಗಳ ಉತ್ಪನ್ನವನ್ನು 7 ವೃತ್ತಿಗಳಾಗಿ ವಿಭಾಗಿಸಿ, ಒಂದು

ಭಾಗವನ್ನು ಪೆರುಮಾಳದೇವನಿಗೆ ಪ್ರೀತಿಯ ಕೊಡುಗೆಯಾಗಿ ಕೊಟ್ಟಿದ್ದಾರೆ. ಆ ಗ್ರಾಮಗಳಿಗೆ ಹಲವಾರು ತೆರಿಗೆಗಳಿಂದ ವಿನಾಯಿಸಿ ನೀಡಿರುವುದನ್ನು ಈ ಶಾಸನ ಸಂಖ್ಯೆ – 66ರಲ್ಲಿ ತಿಳಿಸುತ್ತದೆ.

ಮತ್ತೊಂದು ಶಾಸನ ಸಂಖ್ಯೆ – 67ರಲ್ಲಿ ಪೆರುಮಾಳದೇವ ದಂಡನಾಯಕನು ಮಾಧವ ದೇವಾಲಯದಲ್ಲಿ ಪಂಚಿಕೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಇಂದ್ರ ಪರ್ವ ಮತ್ತು ಆರಣಿ ಪೂಜೆಗಳಿಗಾಗಿ ದತ್ತಿಯನ್ನು ನೀಡಿದ್ದಾನೆ. ಅಲ್ಲದೆ ಋಗ್ವೇದ, ಯಜುರ್ವೇದ ಅಭ್ಯಸಿಸುತ್ತಿದ್ದ ವಿದ್ಯಾರ್ಥಿಗಳಿಗೆ ಆಹಾರಕ್ಕಾಗಿ ಮತ್ತು 16 ಬ್ರಾಹ್ಮಣರ ಆಹಾರ ವಸತಿಗಾಗಿ ಛತ್ರವನ್ನು ಸ್ಥಾಪಿಸಿದ್ದನ್ನು ತಿಳಿಸುತ್ತದೆ. ಜೊತೆಗೆ ಈತನ ತಂಗಿ ಬಸವಿಯಕ್ಕ ಮಾಧವ ದೇವಾಲಯಗಳಲ್ಲಿ ಪಕ್ವಾನ್ನದ ಉಪಾಹಾರಕ್ಕೆಂದು (ಉಪ್ಪಾರ) ಭೂಮಿಯನ್ನು ದತ್ತಿಯಾಗಿ ನೀಡಿದ್ದಾಳೆಂದು ಹೇಳಲಾಗಿದೆ. ಅಲ್ಲೇ ಇರುವ ಕ್ರಿ.ಶ.1341ರ ಕಾಲಘಟ್ಟಕ್ಕೆ ಸೇರಿದ ಮತ್ತೊಂದು ಶಾಸನವು ಈ ದೇವಾಲಯಗಳಿಗೆ ದಾನವಾಗಿ ಬಂದಿದ್ದ ಗದ್ದೆಗಳನ್ನು ತೋಟಗಳನ್ನಾಗಿ ಪರಿವರ್ತಿಸಲು ಮಹಾಜನರು ಸರ್ವಸಮ್ಮತದಿಂದ ಒಪ್ಪಿರುವುದನ್ನು ಹೇಳುತ್ತದೆ.

ಕ್ರಿ.ಶ.1284ರಲ್ಲಿ ಮೂರನೆಯ ನರಸಿಂಹನಿಂದ ದಾನವಾಗಿ ಪಡೆದ ಮೂರು ಹಳ್ಳಿಗಳ ಆದಾಯವನ್ನು ಶ್ರೀಮಾಧವದೇವರು, ಶ್ರೀರಾಮಕೃಷ್ಣದೇವರು, ಶ್ರೀವರದಅಲ್ಲಾಳನಾಥ ದೇವರುಗಳ ಅಮ್ರಿತಪಡಿ, ಅಂಗಭೋಗ, ರಂಗಭೋಗ, ದೀಪೋತ್ಸವ, ತಿರಿನಾಳು ವಿಶೇಷೋತ್ಸವ ಮುಂತಾದ ಕಾರ್ಯಗಳಿಗಾಗಿ ದಾನವಾಗಿ ನೀಡಿದ್ದಾರೆ. ಪೆರುಮಾಳ ದೇವನೇ ಈ ದೇವಾಲಯಗಳಿಗೆ ಆ ದಾನ ದತ್ತಿಗಳಿಗೆ ಮೇಲ್ವಿಚಾರಕನಾಗಿರುವಂತೆ ತಿಳಿಸಿದೆ. ಮುಂದುವರಿದು ಈ ಶಾಸನವು ಕ್ರಿ.ಶ.1309ರಲ್ಲಿ ಮತ್ತೊಂದು ವಿಷಯವನ್ನು ಸೇರಿಸಿದೆ. ಪೆರುಮಾಳದೇವನ ಮಗ ಚಕ್ರವರ್ತಿ ದಂಡನಾಯಕನು ಪುನರ್ ಶಾಸನ ಹೊರಡಿಸಿ ಪೆರುಮಾಳೆಯದೇವನಿಗೆ ಕೊಡುಗೆಯಾಗಿ ಬಂದ ಹಲವು ಹಳ್ಳಿಗಳನ್ನು ಬೆಳ್ಳೂರಿನ ಮಹಾಜನಗಳ ಸುಪರ್ದಿಗೆ ಬಿಟ್ಟುಕೊಟ್ಟಿರುವುದನ್ನು ತಿಳಿಸುತ್ತದೆ.

ಈ ಶಾಸನಗಳಿಂದ ಬೆಳ್ಳೂರಿನ ಆದಿ ಮಾಧವರಾಯ ದೇವಾಲಯವು ಹೊಯ್ಸಳರ ಕಾಲದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು ಎಂಬುದು ತಿಳಿಯುತ್ತದೆ. ಈ ದೇವಾಲಯದ ಆಡಳಿತ ಮಂಡಳಿ 96 ವೃತ್ತಿಯ ಮಹಾಜನಗಳಿಂದ ನಿರ್ವಹಿಸಲ್ಪಡುತ್ತಿತ್ತು. ಈ ದೇವಾಲಯದ ಮೇಲ್ವಿಚಾರಕರಾಗಿ ಅಥವಾ ಒಡೆಯರಾಗಿ ಹೊಯ್ಸಳರ 3ನೆಯ ನರಸಿಂಹನ ಮಹಾಪ್ರಧಾನನಾದ ಪೆರುಮಾಳ ದಂಡನಾಯಕನನ್ನು ಆ ಮಹಾಜನಗಳೇ ಸರ್ವಸಮ್ಮತದಿಂದ ಆಯ್ಕೆ ಮಾಡಿದ್ದು ತಿಳಿದುಬರುತ್ತದೆ. ಈ ದೇವಾಲಯಕ್ಕಾಗಿ ಆತ ಮತ್ತು ಆತನ ಮಗ ಚಕ್ರವರ್ತಿ ದಂಡನಾಯಕರು ಹಲವಾರು ದತ್ತಿ–ದಾನಗಳನ್ನು ನೀಡಿದ್ದಾರೆ. ಈ ದೇವಾಲಯದಲ್ಲಿ ಶಿಕ್ಷಣವನ್ನು ನೀಡುತ್ತಿದ್ದರು. ಇಲ್ಲಿ ಬಾಲಸಿಕ್ಷೆ ಎಂದರೆ ಬಾಲ್ಯ ಶಿಕ್ಷಣಕ್ಕೆ ಎಂದು ಅರ್ಥ. ಯುಜುರ್ವೇದ, ಋಗ್ವೇದಗಳ ಬೋಧನೆ ಅಧ್ಯಯನಕ್ಕೆಂದು ಪ್ರತ್ಯೇಕವಾಗಿ ಉಲ್ಲೇಖಿಸಿ ದಾನವನ್ನು

ನೀಡಲಾಗಿದೆ. ಜೊತೆಗೆ ಈ ಶಾಸನಗಳಲ್ಲಿ ಉಲ್ಲೇಖವಾಗಿರುವ ಅಂಗಭೋಗ, ರಂಗಭೋಗಗಳೆಂದರೆ, ದೇವಾಲಯದಲ್ಲಿ ಗರ್ಭಗುಡಿಯ ಮೂರ್ತಿಗೆ ಸಲ್ಲುವ ಅಭಿಷೇಕ, ಅಲಂಕಾರಗಳು, ಪೂಜೆ ಮುಂತಾದವುಗಳು ಅಂಗಭೋಗವಾಗುತ್ತದೆ. ದೇವಾಲಯದ ರಂಗಮಂಟಪದಲ್ಲಿ ದೇವರ ಸೇವೆಗೆಂದು ಸಂಗೀತ, ನೃತ್ಯ ಮಾಡುವುದನ್ನು ರಂಗಭೋಗ ಎನ್ನುವರು. ಈ ರೀತಿ ಮಾಡುವವರನ್ನು ದೇವದಾಸಿಯರು ಎಂದು ಕರೆಯುತ್ತಿದ್ದರು. ಆದ್ದರಿಂದ ಈ ಮಾಧವ ದೇವಾಲಯದಲ್ಲಿ ದೇವದಾಸಿ ಪದ್ಧತಿ ರೂಢಿಯಲ್ಲಿತ್ತೆಂಬುದು ತಿಳಿಯುತ್ತದೆ.

**ಗೋಪಾಲಕೃಷ್ಣ ದೇವಾಲಯ–ಆರಣಿ** – ಆರಣಿ ಗ್ರಾಮವು ನಾಗಮಂಗಲದಿಂದ 25 ಕಿ.ಮೀ ಹಾಗೂ ಬೆಳ್ಳೂರಿನಿಂದ ವಾಯುವ್ಯಕ್ಕೆ 5 ಕಿ.ಮೀ. ದೂರದಲ್ಲಿದೆ. ಇದು 10ನೆಯ ಶತಮಾನದಲ್ಲಿ ಗಂಗರ ಆಳ್ವಿಕೆಗೆ ಒಳಪಟ್ಟಿತ್ತೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ಆರಣಿಯಲ್ಲಿ ಪ್ರಸಿದ್ಧವಾದ ಗೋಪಾಲಕೃಷ್ಣ ದೇವಾಲಯವಿದ್ದು, ಇದು ಪುರಾತನವಾದುದ್ದಾಗಿದೆ. ಪೂರ್ವಾಭಿಮುಖವಾಗಿರುವ ಇದರ ಗರ್ಭಗೃಹದಲ್ಲಿ ಸುಮಾರು ಐದೂವರೆ ಅಡಿಯ ಗೋಪಾಲಕೃಷ್ಣನ ಸುಂದರವಾದ ವಿಗ್ರಹವಿದೆ. ಈ ದೇವಾಲಯಕ್ಕೆ ಎರಡು ಸುಖನಾಸಿಗಳಿವೆ. ನವರಂಗದ ನಂತರದ ಸುಖನಾಸಿಯಲ್ಲಿ ಎರಡು ಕಣಜಗಳಿವೆ. ಒಂಭತ್ತು ಅಂಕಣದ ನವರಂಗದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳಲ್ಲಿ ಗರುಡ, ಗಣಪತಿ ಇತ್ಯಾದಿ ದೇವತೆಗಳ ಉಬ್ಬು ಶಿಲ್ಪಗಳಿವೆ. ನವರಂಗದಲ್ಲಿ ಚಾಮುಂಡಿಯ ವಿಗ್ರಹ ಮೋಹಕವಾಗಿದ್ದು, ಎಲ್ಲಾ ಆಯುಧಗಳನ್ನು ಹೊಂದಿದೆ. ನವರಂಗದ ಛತ್ತು ಕಮಲಾಲಂಕೃತವಾಗಿದ್ದು, ಬಾಗಿಲವಾಡದಲ್ಲಿ ಪೂರ್ಣ ಕುಂಭ ಲಲಾಟದಲ್ಲಿ ಬಾಲಕೃಷ್ಣನ ಕಿರುಕೆತ್ತನೆಗಳಿವೆ. ಈ ದೇವಾಲಯಕ್ಕೆ ಜಗುಲಿಯೂ ಇದೆ. ಮುಂದೆ ಇರುವ ವಿಶಾಲವಾದ ಮುಖಮಂಟಪದ ಬಳಿ ದ್ವಾರಪಾಲಕ ಶಿಲ್ಪಗಳಿವೆ. ಸರಿಸುಮಾರು 15ನೆಯ ಶತಮಾನದ ರಚನೆಯಾದ ಭಿತ್ತಿಯು ನಿರಾಡಂಬರವಾಗಿದ್ದು, ಎದುರಲ್ಲಿ 15 ಅಡಿ ಎತ್ತರದ ಗರುಡಗಂಬವಿದೆ. ಗುಡಿಯ ಬಲಕ್ಕಿರುವ ದೇವಿಗುಡಿಯ ಗರ್ಭಗೃಹ ಹಾಗೂ ಅಂತರಾಳಗಳಷ್ಟೇ ಉಳಿದಿದ್ದು, ಮಹಿಷಮರ್ದಿನಿ, ಬಾಲಗೋಪಾಲ, ಕೇಶವ, ಗರುಡ ಮುಂತಾದ ಶಿಲ್ಪಗಳಿವೆ. ಗಂಗರ ಕಾಲದ್ದೆಂದು ಗುರುತಿಸಬಹುದಾದ ಐದಾರು ಗಿಡ್ಡನೆಯ ಕಂಬಗಳಿದ್ದು, ಅದರ ಬಳಿಯಲ್ಲಿ ಗಣಪತಿಯ ಶಿಲ್ಪವಿದೆ. ಗಂಗರ ಎರಡನೆಯ ಮಾರಸಿಂಹನ ಮಂತ್ರಿಯಾದ ಮಾಬಲಯ್ಯನು ಆರಣಿಯ ಕೆರೆ ಬಯಲಿನಲ್ಲಿ ಗದ್ದೆಯನ್ನು ಬಿತ್ತುವಟ್ಟವಾಗಿ ನೀಡಿದ್ದಾನೆ.78 ಹಲವಾರು ಸುಂಕಗಳನ್ನು ದೇವಾಲಯಕ್ಕಾಗಿ ಧಾರಾಪೂರ್ವಕವಾಗಿ ನೀಡಿರುವುದನ್ನು ಅಲ್ಲಿನ ಶಾಸನ79 ತಿಳಿಸುತ್ತದೆ. ಒಟ್ಟಾರೆ ಆರಣಿಯು ಗಂಗರ ಮತ್ತು ಹೊಯ್ಸಳರ ಕಾಲದಲ್ಲಿ ಪ್ರಮುಖ ಸ್ಥಳವಾಗಿತ್ತೆಂದು ಅಲ್ಲಿ ದೊರೆತಿರುವ ಶಾಸನಗಳು ಮತ್ತು ದೇವಾಲಯದಿಂದ ತಿಳಿದುಬರುತ್ತದೆ.

**ಚನ್ನಕೇಶವ (ಚೆನ್ನಿಗರಾಯ) ದೇವಾಲಯ–ದಡಗ** – ದಡಗ ಅಥವಾ ದಡಿಗ ಎಂದು ಕರೆಯಲ್ಪಡುವ ಈ ಗ್ರಾಮವನ್ನು ಶಾಸನಗಳಲ್ಲಿ ದಡಿಗನಕೆರೆ ಎಂದು ಕರೆಯಲಾಗಿದೆ. ಇದು

ನಾಗಮಂಗಲದಿಂದ ವಾಯುವ್ಯಕ್ಕೆ 12 ಕಿ.ಮೀ. ದೂರವಿದೆ. ಈ ಗ್ರಾಮದಲ್ಲಿ ಗಂಗರ, ಹೊಯ್ಸಳರ, ವಿಜಯನಗರ ಕಾಲದ ಆಡಳಿತದ ಕುರುಹುಗಳು ಕಂಡುಬರುತ್ತವೆ. ಈ ಊರು ಹಿಂದೆ ಅಗ್ರಹಾರವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಜೊತೆಗೆ ಗಂಗರ ಅರಸ ದಡಿಗನಿಂದ ಈ ಗ್ರಾಮ ಮತ್ತು ಕೆರೆ ನಿರ್ಮಾಣವಾಯಿತು, ಅದರ ನೆನಪಿಗಾಗಿ ಈ ಗ್ರಾಮಕ್ಕೆ ದಡಿಗನಕೆರೆ ಎಂಬ ಹೆಸರು ಬಂದಿದೆ ಎಂಬ ಐತಿಹ್ಯವೂ ಕೂಡ ಇಲ್ಲಿ ಪ್ರಚಲಿತದಲ್ಲಿದೆ. ಇಲ್ಲಿ ಪ್ರಸಿದ್ಧವಾದ ಹೊಯ್ಸಳ ವಾಸ್ತುಶಿಲ್ಪದ ಚೆನ್ನಿಗರಾಯ ದೇವಾಲಯವಿದೆ. ಈ ದೇವಾಲಯವನ್ನು ಮುಂದೆ ವಿಜಯನಗರ ಅರಸರ ಕಾಲದಲ್ಲಿ ವಿಸ್ತರಿಸಲಾಗಿದೆ. ಇದು ದೊಡ್ಡ ದೇವಾಲಯವಾಗಿದ್ದು, ಇಂದು ಶಿಥಿಲವಾಗಿ ಜೀರ್ಣಾವಸ್ಥೆಗೆ ಬಂದು ನಿಂತಿದೆ. ಇದರಲ್ಲಿ ಗರ್ಭಗುಡಿ, ಸುಖನಾಸಿ, ನವರಂಗ ಮತ್ತು ವಿಶಾಲವಾದ ಪ್ರಾಂಗಣಗಳಿವೆ. 15 ಅಂಕಣದ ನವರಂಗವಿದ್ದು, ಪ್ರಾಂಗಣವು ಸುಮಾರು 17 ಅಡಿ ಎತ್ತರದ 20 ಕಂಬಗಳನ್ನು ಹೊಂದಿದೆ. ಈ ದೇವಾಲಯ ಪಾಳು ಬಿದ್ದಿರುವುದರಿಂದ ಗರ್ಭಗುಡಿಯಲ್ಲಿದ್ದ ಮೂಲ ಮೂರ್ತಿಯನ್ನು ಕೆರೆಯ ಅಂಚಿನ ಒಂದು ಮಂಟಪದಲ್ಲಿ ಇರಿಸಲಾಗಿದೆ. ಸಾಕಷ್ಟು ದೇವಾಲಯಗಳು ಹೀಗೆ ಸಂರಕ್ಷಣೆ ಇಲ್ಲದೇ ಪಾಳುಬಿದ್ದು ನಮ್ಮ ವಾಸ್ತುಶಿಲ್ಪ ಕೊಡುಗೆಗಳು ಕಣ್ಮರೆಯಾಗುತ್ತಿರುವುದು ಶೋಚನೀಯ ಸಂಗತಿಯಾಗಿದೆ. ಈ ದೇವಾಲಯದ ಬಳಿಯಿರುವ ಶಾಸನಗಳು ದೇವರ ಪ್ರತಿಷ್ಠಾಪನೆ, ನಿರ್ಮಾಣ ಕಾರ್ಯ ಮಾಡಿದ ವಿವರಗಳನ್ನು ನೀಡುತ್ತವೆ. ಈ ದೇವಾಲಯವು ಕ್ರಿ.ಶ.1285ರ ಹೊತ್ತಿಗೆ ನಿರ್ಮಾಣಗೊಂಡಿತ್ತು ಎಂಬುದಕ್ಕೆ ದೇವಾಲಯದ ಒಂದನೆಯ ಅಂಕಣದ ತೊಲೆಯ ಮೇಲಿರುವ ಶಾಸನವು ಆಧಾರವನ್ನು ಒದಗಿಸುತ್ತದೆ. ದಡಿಗನ ಕೆರೆಯ ಮಹಾಜನರು ದೇವಾಲಯಕ್ಕೆ ಬಿಟ್ಟ ದತ್ತಿ ಭೂಮಿಯ ಭತ್ತ, ರಾಗಿ ಇತ್ಯಾದಿಗಳನ್ನು ಮಾರಿ 5 ಪಣಕ್ಕೆ ಮಾದೇವರ ವಿಮಾನ ನಿರ್ಮಾಣ ಮಾಡಿದ್ದಾರೆ. ಇದಕ್ಕೆ ಚಂನಕೇಶವ ದೇವರನ್ನು ಸಾಕ್ಷಿಯಾಗಿ ಹೇಳಿದ್ದಾರೆ. ಇದರಿಂದ ಈ ಕಾಲಕ್ಕಾಗಲೇ ಈ ದೇವಾಲಯವು ನಿರ್ಮಾಣಗೊಂಡು ಪ್ರಸಿದ್ಧಿಯನ್ನು ಪಡೆದಿತ್ತು ಎಂಬುದು ತಿಳಿಯುತ್ತದೆ. ಕ್ರಿ.ಶ.1400ರಲ್ಲಿ ಚನ್ನಕೇಶವ ದೇವಾಲಯದ ಸುತ್ತಾಲಯ ಅಂದರೆ ಆವರಣದ ಕಲ್ಲು ಕೆಲಸ ಮಾಡಲು ಪತ್ತಂಗಿ ವೀರಪಿಳ್ಳನ ಮದವಳಿಗೆ ನೀಡಿದ ಹಣದ ವಿವರವನ್ನು ನವರಂಗದ ಅಂಕಣದ ತೊಲೆಯ ಮೇಲಿರುವ ಶಾಸನ ಸಂಖ್ಯೆ – 87ರಲ್ಲಿ ತಿಳಿಸುತ್ತದೆ. ಚನ್ನಕೇಶವ ದೇವಾಲಯದಲ್ಲಿ ಲಕ್ಷ್ಮಿದೇವರ ಪ್ರತಿಷ್ಠಾಪನೆ ಮಾಡಲು ನಾರಣದೇವನಿಗೆ ಒಂದು ಗದ್ಯಾಣಕ್ಕೆ ಅಡಿಕೆ ಭೂಮಿಯನ್ನು ಕೊಟ್ಟ ವಿಷಯನವನ್ನು ಅಲ್ಲೇ ಇರುವ ಮತ್ತೊಂದು ಶಾಸನ ಸಂಖ್ಯೆ – 88ರಲ್ಲಿ ತಿಳಿಸುತ್ತದೆ. ಹೀಗೆ ದೇವಾಲಯದ ದತ್ತಿ ಭೂಮಿಯ ಆದಾಯವನ್ನು ದೇವಾಲಯದ ಜೀರ್ಣೋದ್ಧಾರಕ್ಕೆ ಮತ್ತು ಖರ್ಚು–ವೆಚ್ಚಗಳಿಗೆ ಬಳಸುತ್ತಿದ್ದ ವಿವರಗಳನ್ನು ಶಾಸನಗಳಲ್ಲಿ ಹಾಕಿಸಿ ಪಾರದರ್ಶಕತೆ ಮೆರೆಯುತ್ತಿದ್ದ ಅಂದಿನ ಆಡಳಿತಗಾರರ ಪ್ರಾಮಾಣಿಕತೆಯನ್ನು ಈ ಶಾಸನ ತಿಳಿಸುತ್ತದೆ.

**ಲಕ್ಷ್ಮಿನಾರಾಯಣ ದೇವಾಲಯ–ದೇವಲಾಪುರ** – ನಾಗಮಂಗಲದಿಂದ ಪೂರ್ವಕ್ಕೆ 14 ಕಿ.ಮೀ ದೂರದಲ್ಲಿರುವ ದೇವಲಾಪುರವು ಒಂದು ಹೋಬಳಿ ಕೇಂದ್ರವಾಗಿದೆ. ಊರಿನಲ್ಲಿರುವ ಶ್ರೀಲಕ್ಷ್ಮಿನಾರಾಯಣ ದೇವಾಲಯದ ಮೂಲಭಾಗ ಮೂರನೇ ವೀರಬಲ್ಲಾಳನ ಕಾಲದ್ದಾಗಿದೆ. ಇದೊಂದು ಪುಟ್ಟ ದೇವಾಲಯವಾಗಿದೆ. ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳಿವೆ. ಈ ದೇವಾಲಯವನ್ನು ಎತ್ತರವಾದ ಜಗಲಿಯ ಮೇಲೆ ಕಟ್ಟಲಾಗಿದೆ. ಜಗಲಿಯಲ್ಲಿ ನಾಲ್ಕು ಕಂಬಗಳಿದ್ದು, ಇದನ್ನು ಹಾಯ್ದು ದೇವಾಲಯಕ್ಕೆ ಪ್ರವೇಶಿಸಿದರೆ 9 ಅಂಕಣಗಳ ನವರಂಗವಿದೆ. ಈ ದೇವಾಲಯಕ್ಕೆ ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿರುವ 17ನೆಯ ಶತಮಾನದ ಗೋಪುರವಿದೆ. ಗರ್ಭಗೃಹದ ಒಳಗಿನ ಲಕ್ಷ್ಮಿನಾರಾಯಣ ವಿಗ್ರಹವು 8 ಅಡಿ ಎತ್ತರದಲ್ಲಿ ಎಂಬುದು ತಿಳಿದುಬರುತ್ತದೆ. ಹೀಗೆ, ನಾಗಮಂಗಲ ತಾಲೂಕಿನಲ್ಲಿ ವೈಷ್ಣವ ದೇವಾಲಯಗಳು ಪ್ರಾಚೀನ ಕಾಲಘಟ್ಟದಲ್ಲೇ ನಿರ್ಮಾಣಗೊಂಡಿರುವುದು ಒಂದು ಚಾರಿತ್ರೆಯನ್ನು ಪ್ರತಿನಿಧಿಸುತ್ತವೆ ಎಂದು ಹೇಳಬಹುದು.

**ಅಭ್ಯಸಿಸಿರುವ ಗ್ರಂಥಗಳು**


1. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು
2. ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು
3. ಮಂಡ್ಯ ಜಿಲ್ಲೆ ದರ್ಶನ, ಮಂಡ್ಯ ಜಿಲ್ಲೆ
4. ಜಗನ್ನಾಥ್, ಸರೋಜಿನಿ, ದೇವಸ್ಥಾನ ಪೂಜೆಯ ಮೇಲೆ ಶ್ರೀರಾಮಾನುಜಾಚಾರ್ಯರ ಪ್ರಭಾವ
5. ಕರುಣಾಕರನ್.ಕೆ, ಕರ್ನಾಟಕದ ದೇವಾಲಯಗಳು ಮತ್ತು ದಂತಕಥೆಗಳು